US – 040

II ಸೆಮಿಸ್ಟರ್ ಬಿ.ಎಸ್ಸಿ. ಪರೀಕ್ಷೆ, ಮೇ 2017
(ಫ್ರೆಷರ್ಸ್ + ರಿಪೀಟರ್ಸ್) (CBCS) (2014-15 and Onwards)
ಕನ್ನಡ
ಕನ್ನಡ ಭಾಷಾ ಪತ್ರಿಕೆ – II
(ಸುವರ್ಣ ಸಂಪದ ಮತ್ತು ಅಂಗುಲೀಮಾಲ)

ಸಮಯ : 3 ಗಂಟೆಗಳು ಗರಿಷ್ಠಾಂಕಗಳು : 70

I. ಅ) ಈ ಪದ್ಯದ ಭಾವಾರ್ಥ ಬರೆಯಿರಿ : (1×6=6)

ಇಂಡಿಯಾ –
ಇಲ್ಲೆ, ಇಲ್ಲೆ ಸತ್ತ ಬದುಕ ಬದುಕುವ ನನಗೆ
ಇಲ್ಲೆ ಅಡ್ಡಾಡುವ ನನಗೆ
ಇಲ್ಲೆ ಹುಟ್ಟಿಕೊಂಡದ್ದು ಬೆಂಕಿ
ಕಬಳಿಸುತ್ತಿರುವ ನನ್ನ ಕಡು ದಾರಿದ್ರಮಯ ಭಯಾನಕ
ಗಹಗಹಿಸುವುದು ನಾಳೆಗಳ ಇಂದೇ ತಂದು
ಇದಕ್ಕುತ್ತರ ಇದೆಯಾ ನಿನ್ನಲ್ಲಿ ?
ಇದೆಲ್ಲ ಕಂಡು
ಸುಮ್ಮನೆ ಒಳಗೆ ಕುದಿಕುದಿದು
ದಹಿಸುತ್ತಾ ಕೂರಲಾರೆ

ಆ) ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ : (2×2=4)

1) ಡಾ. ಸಿದ್ಧಲಿಂಗಯ್ಯ
2) ಅಹಲ್ಯೆ
3) ಕಲಿತ ಕಪ್ಪು ಹುಡುಗ
4) ಶ್ರೇಷ್ಠನೂ ಕನಿಷ್ಠನೂ ಆದ ಮನುಷ್ಯ.

ಇ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ : (1×10=10)

1) 'ಕತ್ತೆ ಮತ್ತು ಧರ್ಮ' ಕವಿತೆಯಲ್ಲಿ ಜನರ ಮೌಢ್ಯತೆ ಹೇಗೆ ವ್ಯಕ್ತವಾಗಿದೆ ? ವಿವರಿಸಿ.
2) ಗಂಡಂದಿರನ್ನು ಪ್ರಶ್ನಿಸದಿರುವ ಪುರಾಣ ಸ್ತ್ರೀಯರ ಬಗ್ಗೆ ಕೆ. ಶರೀಫ ಅವರ ನಿಲುವನ್ನು ವಿವರಿಸಿ.

II. ಅ) **ಎರಡು** ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : (2×5=10)

1) ಆನಂದನು ಅಂಗುಲೀಮಾಲನನ್ನು ವರ್ಣಿಸಿದ ಬಗೆ.

2) ಅಂಗುಲೀಮಾಲನ ತಳಮಳವನ್ನು ಬುದ್ಧನು ಪರಿಹರಿಸಿದ ರೀತಿ.

3) ಪುಣ್ಯಾಕ್ಷನಾದ ನಂತರ ಅಂಗುಲೀಮಾಲನ ಜೀವನ.

ಆ) **ಒಂದು** ಪ್ರಶ್ನೆಗೆ ವಿವರವಾದ ಉತ್ತರ ಬರೆಯಿರಿ : (1×10=10)

1) 'ಅಂಗುಲೀಮಾಲ' ನಾಟಕದಲ್ಲಿ ಬುದ್ಧನ ವ್ಯಕ್ತಿತ್ವವು ಮೂಡಿಬಂದಿರುವ ಬಗೆಯನ್ನು ವಿವರಿಸಿ.

2) ಬುದ್ಧ ಮತ್ತು ಅವನ ಶಿಷ್ಯರ ಸಂಬಂಧ ಹೇಗಿತ್ತು ? ವಿವರಿಸಿ.

III. ಅ) **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ : (1×5=5)

1) ಪುಟ್ಟಸ್ವಾಮಿಯು ತನ್ನ ತಮ್ಮ ಚಿಕ್ಕರಾಮನ ಕಷ್ಟವನ್ನು ಕಡಿಮೆ ಮಾಡಿದ ಬಗೆ.

2) ದಗಡೂವಿನ ಮದುವೆಯ ವಿಚಿತ್ರ ಮೆರವಣಿಗೆ.

ಆ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ : (1×10=10)

1) ಬೀರ ಮತ್ತು ಲಕ್ಷ್ಮಿಯರನ್ನು 'ಮಾರಿಕೊಂಡವರು' ಎನ್ನಬಹುದೇ ? ವಿವರಿಸಿ.

2) ಜೀತ ಕಥೆಯ ಸ್ವರೂಪವನ್ನು ವಿವರಿಸಿ.

IV. ಅ) **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ : (1×5=5)

1) ಜಾನಪದ ಸಾಹಿತ್ಯದ ಇಹನಿಷ್ಠ ಧೋರಣೆ.

2) ಇರುವೆಯ ಕತೆಯನ್ನು ಕೇಳಿ ದಶರಥನು ತಳಮಳಗೊಳ್ಳಲು ಕಾರಣ.

ಆ) **ಒಂದು** ಪ್ರಶ್ನೆಗೆ ವಿವರವಾಗಿ ಉತ್ತರಿಸಿ : (1×10=10)

1) ಇರುವೆ ಎಂಬ ಜೀವಿಯ ವೈಶಿಷ್ಟ್ಯವನ್ನು ಲೇಖಕರು ಹೇಗೆ ವಿವರಿಸಿದ್ದಾರೆ ?

2) ಕೆರೆಗಳನ್ನು ಕಾಪಾಡುವ ಮತ್ತು ನೀರನ್ನು ಮರುಬಳಕೆ ಮಾಡುವ ಕ್ರಮಗಳನ್ನು ವಿವರಿಸಿ.